ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಈ ಸೇತುವೆಯನ್ನು ನಬಾರ್ಡ್ ಯೋಜನೆಯಡಿಯಲ್ಲಿ ಕೈಗೊಂಡಿರುವುದಿಲ್ಲ. ಆದರೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಯರನಾಳ ಬಸವನ ಬಾಗೇವಾಡಿ ಮನಗೂಳಿ ರಸ್ತೆಯಲ್ಲಿ ಕುಂಟ ಡೋಣಹಳ್ಳಕ್ಕೆ ಸೇತುವೆಯ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದೆ. ಹಳೆಯ ಸೇತುವೆಯನ್ನು ತೆಗೆಯುವ ಕಾರ್ಯ ಮತ್ತು ಬದಲಿ ರಸ್ತೆ ನಿರ್ಮಾಣ ಕೆಲಸ ಪೂರ್ಣಗೊಂಡಿದ್ದು, ಹೊಸ ಸೇತುವೆ ಅಡಿಪಾಯದ ಕೆಲಸ ಪ್ರಗತಿಯಲ್ಲಿದೆ.

ಆ) ಈ ಕಾಮಗಾರಿಗಾಗಿ ಗೊತ್ತುಪಡಿಸಲಾದ ಅಂದಾಜು ಮೊತ್ತ ರೂ. 80 ಲಕ್ಷಗಳು

ಇ) ಹೌದು.

ಮುಂಗಾರು ಮಳೆಗಾಲ ಪ್ರಾರಂಭವಾಗಿದ್ದರಿಂದ ಸೇತುವೆ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ. ಮಳೆಗಾಲ ಮುಗಿದ ನಂತರ ಸೇತುವೆ ಕೆಲಸವನ್ನು ಪುನಃ ಪ್ರಾರಂಭಿಸಲಾಗುವುದು.

ಈ) ಈ ಸೇತುವೆಯ ನಿರ್ಮಾಣ ಕಾರ್ಯ ಮುಗಿಯುವವರೆಗೆ ಸಾರ್ವಜನಿಕರ ಸಂಚಾರದ ಅನುಕೂಲಕ್ಕಾಗಿ ಬದಲಿ ರಸ್ತೆಯನ್ನು ನಿರ್ಮಿಸಲಾಗಿದೆ.

ಉ) ಈ ಸೇತುವೆಯ ನಿರ್ಮಾಣವನ್ನು ಡಿಸೆಂಬರ್ 2001ರ ವೇಳೆಗೆ ಮುಗಿಸಲಾಗುವುದು.

ಊ) ಮಂಜೂರಾದ ಹಣದಲ್ಲಿ ಈಗಾಗಲೇ 6.75ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದು, 73.25 ಲಕ್ಷಗಳು ಉಳಿದಿರುತ್ತವೆ.

ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಸಾಮಾಜಿಕ ಅರಣ್ಯ ಅಭಿವೃದ್ಧಿ ಯೋಜನೆ.

2201(3390) ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ (ಬಸವನ ಬಾಗೇವಾಡಿ) :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪುಸ್ತಕ ಸಾಲಿನಲ್ಲಿ ವಿಜಾಪುರ ಜಿಲ್ಲೆಯಲ್ಲಿ ಬಸವನಬಾಗೇವಾಡಿ ಮತಕ್ಷೇತ್ರದ ಕೃಷ್ಣಾನದಿಯ ಪುನರ್ವಸತಿ ಕೇಂದ್ರಗಳ ಗ್ರಾಮಗಳಲ್ಲಿ ರೆಗ್ಯುಲರ್ ಅಥವಾ ಸಾಮಾಜಿಕ ಅರಣ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ?

ಆ) ಜಾರಿಗೊಳಿಸಿದಲ್ಲಿ ಈ ಜಾಗದಲ್ಲಿ ಹುಣಸೆಮರ ಹಾಗೂ ಬೇವಿನ ಮರ ನೆಡುವ ಕಾರ್ಯಯೋಜನೆ ಪರಿಶೀಲನೆಯಲ್ಲಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು.

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ನಾಗಮಂಗಲ ತಾಲ್ಲೂಕಿನ ಶ್ರೀನಿವಾಸ್ ಡಿಸ್ಟಲರೀಸ್‌ಗೆ ಪರಿಸರ ಮಂಡಳಿಯಿಂದ ಪರವಾನಿಗೆ ನೀಡಿರುವುದು.

2202(3106) ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ) : – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ನಾಗಮಂಗಲ ತಾಲ್ಲೂಕಿನ ಹಾಲಳ್ಳು ಗ್ರಾಮದ ಸರ್ವೆ ನಂ. 22ರಲ್ಲಿ ಶ್ರೀ ಶ್ರೀನಿವಾಸ ಡಿಸ್ಟಿಲ್ಲರೀಸ್ ಸಂಸ್ಥೆಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಯಾವುದೇ ಆಕ್ಷೇಪಣಾ ರಹಿತಪತ್ರವನ್ನು ಪಡೆಯದೇ ಅನಧಿಕೃತವಾಗಿ ಕಟ್ಟಡದ ಕೆಲಸ (ಮದ್ಯ ತಯಾರಿಕಾ ಘಟಕ) ನಡೆಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಇದನ್ನು ತಡೆಯಲು ಸರ್ಕಾರದ ಕ್ರಮವೇನು?

2. ಆಕ್ಷೇಪಣಾ ರಹಿತ ಪತ್ರ ಪಡೆಯದೇ ಯಾವುದೇ ಮದ್ಯ ತಯಾರು ಘಟಕವನ್ನು ಪ್ರಾರಂಭಿಸಬಹುದೇ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

1) ಶ್ರೀ ಶ್ರೀನಿವಾಸ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್ ಮದ್ಯಸಾರ ಉತ್ಪಾದನಾ ಘಟಕ, ನಾಗಮಂಗಲ ತಾಲ್ಲೂಕು, ಹಾಲಳ್ಳು ಗ್ರಾಮದ ಸರ್ವೆ ನಂ. 22ರಲ್ಲಿ, ಕಟ್ಟಡದ ಕೆಲಸವನ್ನು ಪ್ರಾರಂಭಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ಸ್ವೀಕೃತವಾಗಿತ್ತು.